**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ</u>**
**<u>ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ. 262/2023</u>**
**<u>ದಿನಾಂಕ 21/02/2024</u>**

ಫಿರ್ಯಾದುದಾರರು ಃ ರಾಜ್ಯದ ಪರವಾಗಿ ಗೋಣಿಬೀಡು ಪೊಲೀಸರು.

ಆರೋಪಿತರು ಃ

ಎ-1, ಜಾಕೀರ್ ಹುಸೇನ್ ಯಾನೇ ಜಾಕೀರ್ ಪಾಷ,
ಬಿನ್ಃ ಕಮರ್ ಪಾಷ, 30 ವರ್ಷ ವಯಸ್ಸು,
ವಾಸಃ ಮಾರ್ಕೆಟ್, ವ್ಯಾಪಾರಿ ರಸ್ತೆ ಗೋಣಿಬೀಡು ಟೌನ್,
ಗೋಣಿಬೀಡು ಹೋಬಳಿ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀ. ಜಯಪ್ರಕಾಶ್ ವಿ., ಬಿ.ಎ., ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಮೂಡಿಗೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಮಾಡುತ್ತಿದ್ದೇನೆ.

ಆರೋಪಿಯ ತಾಯಿ ಚಾಸಾ-03 ರವರು ಗೋಣಿಬೀಡು ಪೊಲೀಸ್ ಠಾಣಾ ವ್ಯಾಪ್ತಿಯ ಸಹಿ ಪ್ರಾ ಶಾಲೆ ಗೋಣಿಬೀಡುವಿನಲ್ಲಿ ಮುಖ್ಯ ಅಡಿಗೆಯವರಾಗಿ ಕೆಲಸ ಮಾಡಿಕೊಂಡಿದ್ದು ಶಾಲೆಯ ಬಿಸಿಯೂಟದ ಅಕ್ಷರ ದಾಸೋಹ ಖಾತೆಃ 1162101016113 ಕೆನರಾ ಬ್ಯಾಂಕ್ ಮೂಡಿಗೆರೆ ಇಲ್ಲಿ ಇದ್ದು ಸದರಿ ಖಾತೆಯು ಶಾಲೆಯ ಮುಖ್ಯ ಶಿಕ್ಷಕರಾದ ಚಾಸಾ-1 ರವರ ಮತ್ತು ಮುಖ್ಯ ಅಡುಗೆಯವರಾದ ಚಾಸಾ- 03 ರವರ ಹೆಸರಿನಲ್ಲಿ ಜಂಟಿ ಖಾತೆ ಯಲ್ಲಿದ್ದು ಚಾಸಾ- 03 ರವರು ಸ್ವಂತ ಖಾತೆ ಸಂಖ್ಯೆ: 1162101021305,ನ್ನು ಕೆನರಾ ಬ್ಯಾಂಕ್ ಮೂಡಿಗೆರೆಯಲ್ಲಿ ಹೊಂದಿದ್ದು ಆರೋಪಿತನು ಸಾಕ್ಷಿ- 03 ರವರ ಖಾತೆಗೆ ತನ್ನ ಮೊಬೈಲ್ ನಂಬರ್ 9741349611 ನ್ನು ಲಿಂಕ್ ಮಾಡಿಕೊಂಡು ಕೆನರಾ ಬ್ಯಾಂಕ್ ಮೊಬೈಲ್ ಬ್ಯಾಂಕಿಗ್ ಅಪ್ ನ್ನು ಇನ್ಸಸ್ಟಾಲ್ ಮಾಡಿಕೊಂಡಿದ್ದು ಅದರಲ್ಲಿ ಅಕ್ಷರ ದಾಸೋಹ ಖಾತೆ ಮತ್ತು ವಹಿದಾ ಬಾನು ಚಾಸಾ- 03 ರವರ ಖಾತೆ ಕಂಡುಬಂದಿದ್ದು ಆರೋಪಿತನು ಕರ್ನಾಟಕ ಬ್ಯಾಂಕ್ ಗೋಣಿಬೀಡುವಿನ ತನ್ನ SAVINGS BANK A/C No:2532500101646501 ಕೈ ದಿನಾಂಕಃ 28/04/2022 ರಿಂದ ದಿನಾಂಕಃ -27-06-2022 ರವರೆಗೆ ಒಟ್ಟು ರೂ.3,62,667.20 ರೂ ಹಣವನ್ನು ಮೋಸಮಾಡುವ ಉದ್ದೇಶದಿಂದ ಅಕ್ಷರ ದಾಸೋಹ ಖಾತೆಯಿಂದ ವರ್ಗಾವಣೆ ಮಾಡಿಕೊಂಡು ಅದರಲ್ಲಿ 3 ಲಕ್ಷ ರೂಪಾಯಿ ಹಣವನ್ನು ತನ್ನ

ಮನೆಯ ಬೀರುವಿನಲ್ಲಿಟ್ಟು ಉಳಿದಿದ್ದನ್ನು ಖರ್ಚುಮಾಡಿಕೊಂಡಿರುವುದು ತನಿಖೆಯಿಂದ ಸಾಬೀತಾಗಿರುತ್ತದೆ ಆದುದರಿಂದ, ನೀವು ಭಾ.ದಂ.ಸಂ. ಕಲಂ 403 ಮತ 420 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆದ್ದರಿಂದ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಮೂಡಿಗೆರೆ.

## ಆರೋಪಣೆ

1. ಮೇಲಿನ ಆರೋಪಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಉತ್ತರಃ

2. ಆರೋಪಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?
ಉತ್ತರಃ-

ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ
ಮೂಡಿಗೆರೆ.